ಸಭೆಯು ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ನಾನು ಪ್ರಿವಿಲೇಜ್ ಮೋಷನ್ ಅನ್ನು ಕಳುಹಿಸಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನನ್ನದು ಒಂದು ನಿಲುವಳಿ ಸೂಚನೆ ಇದೆ.

ಅಧ್ಯಕ್ಷರು.—ಈಗ ಅಡ್ಜರ್ನ್‌ಮೆಂಟ್ ಮೋಷನ್‌ಗೆ ಅವಕಾಶ ಕೊಡುತ್ತೇನೆ. ಅದಕ್ಕೂ ಮೊದಲು ಈಗ ಕಾಗದ ಪತ್ರಗಳು ಸಭೆಯ ಮುಂದೆ ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿ) ಅವರು.—(ಅ)ಭಾರತ ಸಂವಿಧಾನದ ೨೧೩ (೧)ನೇ ಪರಿಚ್ಛೇದದ ಮೇರೆಗೆ ೧೯೮೮ನೇ ಇಸವಿಯ ಕರ್ನಾಟಕ ತೆರಿಗೆ ಶಾಸನಗಳ(ತಿದ್ದುಪಡಿ) ಅಧ್ಯಾದೇಶವನ್ನು ಸಭೆಯ ಮುಂದಿಡುತ್ತೇನೆ.

(ಆ) ೧೯೫೭ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ ಶಾಸನದ ೮(ಎ)ನ ಕಲಮಿನ ಮೇರೆಗೆ.—

೧. ಸಿರಾಮಿಕ ಟೈಲ್ಸ್‌ಗಳಿಗೆ ಮಾರಾಟ ತೆರಿಗೆ ವಿನಾಯ್ತಿ ನೀಡುವ ಬಗ್ಗೆ ಸಂಬಂಧಿಸಿದಂತೆ ದಿನಾಂಕ ೨೬ನೇ ಜುಲೈ ೧೯೮೮ರಂದು ಹೊರಡಿಸಲಾದ ಎಫ್‌ಡಿ ೧೩೨ ಸಿಎಸ್‌ಎಲ್ ೮೮ನೇ ಕ್ರಮಾಂಕದ ಅಧಿಸೂಚನೆಯನ್ನು;

೨. ಕರ್ನಾಟಕ ಕೃಷಿಕ ವರ್ತಮಾನ ತೆರಿಗೆ(ತಿದ್ದುಪಡಿ)ನಿಯಮ, ೧೯೮೮ಕ್ಕೆ ಸಂಬಂಧಿಸಿದಂತೆ ದಿನಾಂಕ ೨೦ನೇ ಜುಲೈ ೧೯೮೮ರಂದು ಹೊರಡಿಸಲಾದ ಎಫ್‌ಡಿ ೧೩೨ ಸಿಎಎಕ್ಸ್ ೮೮ನೇ ಕ್ರಮಾಂಕದ ಅಧಿಸೂಚನೆಯನ್ನು;

೩. ಕರ್ನಾಟಕ ಕೃಷಿ ವರ್ತಮಾನ ತೆರಿಗೆ(ತಿದ್ದುಪಡಿ)ನಿಯಮ, ೧೯೮೮ಕ್ಕೆ ಸಂಬಂಧಿಸಿದಂತೆ ದಿನಾಂಕ ೧೪ನೇ ಜುಲೈ ೧೯೮೮ರಂದು ಹೊರಡಿಸಲಾದ ಎಫ್‌ಡಿ ೭೭ ಸಿಎಎಕ್ಸ್ ೮೮ನೇ ಕ್ರಮಾಂಕದ ಅಧಿಸೂಚನೆಯನ್ನು,

೪. ೧೯೫೭ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ ಶಾಸನದ ಅಡಿಯಲ್ಲಿ ಹೊರಡಿಸಿದ ೨೬ ಅಧಿಸೂಚನೆಗಳನ್ನು ರದ್ದುಪಡಿಸುವ ಬಗ್ಗೆ ದಿನಾಂಕ ೩ನೇ ಆಗಸ್ಟ್ ೧೯೮೮ರಂದು ಹೊರಡಿಸಲಾದ ಎಫ್‌ಡಿ ೮೨ ಸಿಎಸ್‌ಎಲ್ ೮೮ನೇ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

(ಇ) ೧೯೬೪ನೇ ಇಸವಿಯ ಕರ್ನಾಟಕ ಭೂ ಕಂದಾಯ ೧೯೧(೨)ನೇ ಕಲಮಿನ ಮೇರೆಗೆ.—

೧. ೧೯೮೭-೮೮ನೇ ಸಾಲಿನಲ್ಲಿ ಮೈಸೂರು ಜಿಲ್ಲೆಯ ೧೩೮ ಗ್ರಾಮಗಳಿಗೆ ಭೂ ಕಂದಾಯ ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ೧೯೮೮ನೇ ಜೂನ್ ೨೨ನೇ ದಿನಾಂಕದಂದು ಹೊರಡಿಸಲಾದ ಆರ್‌ಡಿ ೫೦ ಟಿಆರ್‌ಎಂ ೮೮ನೇ ಕ್ರಮಾಂಕದ ಅಧಿಸೂಚನೆಯನ್ನು;

೨. ೧೯೮೭-೮೮ನೇ ಸಾಲಿನ ಮೈಸೂರು ಜಿಲ್ಲೆಯ ಟಿ. ನರಸೀಪುರ ತಾಲ್ಲೂಕಿನ ೪೧ ಗ್ರಾಮಗಳಿಗೆ ಭೂ ಕಂದಾಯ ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ೧೯೮೮ನೇ ಜುಲೈ ೧೫ನೇ ದಿನಾಂಕದಂದು ಹೊರಡಿಸಲಾದ ಆರ್‌ಡಿ ೫೪ ಟಿಆರ್‌ಎಂ ೮೮ನೇ ಕ್ರಮಾಂಕದ ಅಧಿಸೂಚನೆಯನ್ನು;

೩. ೧೯೮೭-೮೮ನೇ ಸಾಲಿನ ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ೩೬ ಗ್ರಾಮಗಳಿಗೆ ಭೂ ಕಂದಾಯ ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ೧೯೮೮ನೇ ಜುಲೈ ೧೮ನೇ ದಿನಾಂಕದಂದು ಹೊರಡಿಸಲಾದ ಆರ್‌ಡಿ ೫೬ ಟಿಆರ್‌ಎಂ ೮೮ನೇ ಕ್ರಮಾಂಕದ ಅಧಿಸೂಚನೆಯನ್ನು;

೪. ೧೯೮೭-೮೮ನೇ ಸಾಲಿನ ಮೈಸೂರು ಜಿಲ್ಲೆಯ ಕೆ. ಆರ್ ನಗರ ತಾಲ್ಲೂಕಿನ ೧೧೬ ಗ್ರಾಮಗಳಿಗೆ ಭೂ ಕಂದಾಯ ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ೧೯೮೮ನೇ ಜುಲೈ ೧೮ನೇ ದಿನಾಂಕದಂದು ಹೊರಡಿಸಲಾದ ಆರ್‌ಡಿ ೫೧ ಟಿಆರ್‌ಎಂ ೮೮ನೇ ಕ್ರಮಾಂಕದ ಅಧಿಸೂಚನೆಯನ್ನು;

೫. ೧೯೮೦-೮೧ನೇ ಸಾಲಿನ ಧಾರವಾಡ ಜಿಲ್ಲೆ ಶಿಗ್ಗಾಂವ ತಾಲ್ಲೂಕಿನ ೫ ಗ್ರಾಮಗಳಿಗೆ ಭೂ ಕಂದಾಯ ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ೧೯೮೮ನೇ ಜುಲೈ ೨೮ನೇ ದಿನಾಂಕದಂದು ಹೊರಡಿಸಲಾದ ಆರ್‌ಡಿ ೬೫ ಟಿಆರ್‌ಎಂ ೮೮ನೇ ಕ್ರಮಾಂಕದ ಅಧಿಸೂಚನೆಯನ್ನು;